ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ , ಕುಂದಗೋಳ,

ಓ ಎಸ್ ನಂ : 52/14
ಪಿ ಡಬ್ಲು _2

ದಿಃ 07-07-2017 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ಸಂಗತಿಗಳು ಸರಿಯಾಗಿ ಇವೆ ಹಾಗೂ ನಿಜವಾಗಿವೆ , ಅದನ್ನು ನಾನೇ ಹೇಳಿ ಬರೆಸಿರುತ್ತೇನೆ , ಅದರಲ್ಲಿರುವ ಸಹಿ ನನ್ನದು ಎಂದು ಪ್ರಮಾಣೀಕರಿಸುತ್ತಾರೆ ,

ಮುಂದುವರಿದ ಮುಖ್ಯ ವಿಚಾರಣೆ ಃ ಶ್ರೀ ವಾಯ್. ಬಿ.ಎ. ವಕೀಲರಿಂದಃ

1. ನಾನು ಈ ದಾವೆಯಲ್ಲಿ ವಾದಿಯ ಪರ ಸಾಕ್ಷ್ಯ ನುಡಿಯಲು ಬಂದಿದ್ದು, ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಪಾಟೀಸವಾಲು : ಶ್ರೀ ಸಿ.ಎಂ.ಕೆ. ವಕೀಲರಿಂದ : ಪ್ರತಿವಾದಿ ಪರ.

2. ನನಗೆ ಸಾಕ್ಷ್ಯ ನುಡಿಯಲು ಯಾರೂ ಕರೆದಿಲ್ಲ. ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ನಾನಾಗಿಯೇ ಬಂದಿರುತ್ತೇನೆ. ಈ ದಾವೆಯನ್ನು ವಾದಿ ಭೀಮಪ್ಪನು , ರಾಮಪ್ಪನ ವಿರುದ್ದ ಸಲ್ಲಿಸಿರುತ್ತಾನೆ. ಈ ವಿಷಯ ನನಗೆ ಸ್ವಂತಕ್ಕೆ ತಿಳಿದಿದೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

3. ವಾದಿಯ ಮನೆ ನಂಬರ 480. ಆಗಿರುತ್ತದೆ. ಸದರೀ ಮನೆಯನ್ನು ವಾದಿ, ಶಿವಪ್ಪ ರಾಮಪ್ಪ ಅರಳೀಕಟ್ಟಿ ಎಂಬಾತನಿಂದ ಖರೀದಿಸಿದ್ದನು. ಸದರೀ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಸದರೀ ಖರೀದಿ ಆಗಿ ಅಂದಾಜು 50 ವರ್ಷಗಳಿಗಿಂತ ಹೆಚ್ಚು ಆಗಿದೆ. ದಾವಾ ಮನೆ ಪೂರ್ವಕ್ಕೆ ಮುಖ ಮಾಡಿದೆ. ಪೂರ್ವಕ್ಕೆ ಮನೆಯ ಮುಂದೆ ರಸ್ತೆ ಇದೆ.

ರಸ್ತೆ ದಾಟಿ ಪೂರ್ವಕ್ಕೆ ಅಂದಾನಿಯವರ ಮನೆಗಳು ಇವೆ. ಸದರೀ ರಸ್ತೆ ಅಂದಾಜು 12 ಅಡಿ ಅಗಲ ಇದೆ. ಅದು ಗ್ರಾಮ ಪಂಚಾಯತಿ ರಸ್ತೆ. ನಾನು ವಾದಿಯ ಖರೀದಿ ಪತ್ರವನ್ನು ನೋಡಿದ್ದು ಅದರಲ್ಲಿ ಪೂರ್ವಕ್ಕೆ ರಸ್ತೆ ಎಂದು ನಮೂದು ಇರುತ್ತದೆ. ಖರೀದಿ ಪತ್ರದಲ್ಲಿ ರಸ್ತೆಯ ಅಳತೆ ಬರೆದಿಲ್ಲ.

4. ವಾದಿಗೆ ಶ್ರೀಮಪ್ಪ ಎಂಬ ಒಬ್ಬ ತಮ್ಮ ಇರುತ್ತಾನೆ. ದಾವಾ ಮನೆಯನ್ನು ಅವರಿಬ್ಬರೂ ಕೂಡಿ ಇದ್ದಾಗ ಖರೀದಿ ಮಾಡಿರುತ್ತಾರೆ. ಅವರಿಬ್ಬರ ನಡುವೆ ಹಿಸ್ಸೆ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಮನೆಯ ಉತ್ತರ ದಿಕ್ಕಿಗೆ ಶ್ರೀಮಪ್ಪ ಹಾಗೂ ದಕ್ಷಿಣ ದಿಕ್ಕಿಗೆ ವಾದಿ ವಾಸವಾಗಿದ್ದಾನೆ. ಶ್ರೀಮಪ್ಪನ ಮನೆಗೂ ಬಾಗಿಲು ಪೂರ್ವ ದಿಕ್ಕಿಗೆ ಇದೆ. ಖರೀದಿ ಸಮಯದಿಂದಲೂ ಪೂರ್ವ ದಿಕ್ಕಿಗೆ 2 ಬಾಗಿಲು ಇರುತ್ತದೆ. ದಾವಾ ಮನೆ ಹಾಗೂ ಇನ್ನೊಂದು ಭಾಗದ ಮನೆ ವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಮನೆಯ ಪೂರ್ವ ದಿಕ್ಕಿಗೆ ಪ್ರತಿವಾದಿಯರ ಪಿತ್ರಾರ್ಜಿತರ ಮನೆಯ ಆಸ್ತಿ ಇದೆ ಎಂದರೆ ಸರಿ. ವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ಕೂಡಾ ಒಂದು ರಸ್ತೆ ಇದೆ. ಉತ್ತರ ದಿಕ್ಕಿಗೆ ನನ್ನ ಮನೆ ಇದೆ. ನನ್ನ ಮನೆಯ ನಂ. 484 ಆಗಿರುತ್ತದೆ. ನನ್ನ ಮನೆಯ ಬಾಗಿಲು ಕೂಡಾ ಪೂರ್ವ ದಿಕ್ಕಿಗೆ ಇದೆ. ನನ್ನ ಮನೆಯ ಬಾಗಿಲಿನ ಪೂರ್ವಕ್ಕೆ ಕೂಡಾ ಗ್ರಾಮ ಪಂಚಾಯತಿ ರಸ್ತೆ ಇದೆ. ವಾದಿಯ ಮನೆಯ ದಕ್ಷಿಣಕ್ಕೆ ಆತನಿಗೆ ಸೇರಿದ ಜಾಗ ಇದೆ. ನಾನು ಹೇಳುವ ಚಕಬಂದಿಯಂತೆ ದಾವಾ ಮನೆ, ನನ್ನ ಮನೆ ಹಾಗೂ ಶ್ರೀಮಪ್ಪನ ಮನೆ ಇಲ್ಲ ಎಂದರೆ ಸರಿಯಲ್ಲ. ದಾವಾ ಮನೆ ಮತ್ತು ಶ್ರೀಮಪ್ಪನ ಮನೆ ಹಿಸ್ಸೆ ಆಗುವ ಮೊದಲೇ ಪ್ರತ್ಯೇಕ ಮನೆಗಳು ಆಗಿದ್ದವು. ಸಾಕ್ಷಿ ಮುಂದುವರೆದು ಅವರೆಡರೂ ಮನೆಗಳು ಏಕ ಮನೆಗಳು ಎಂದು ನುಡಿಯುತ್ತಾರೆ. ಸದರೀ ಮನೆಗೆ ಮೊದಲು ಉತ್ತರ ದಿಕ್ಕಿಗೆ ಬಾಗಿಲು ಇತ್ತು ಎಂದರೆ ಸರಿಯಲ್ಲ. ಸದರೀ ಉತ್ತರ ದಿಕ್ಕಿನ ಮನೆ ಶ್ರೀಮಪ್ಪನ ಹಿಸ್ಸೆಗೆ ಹೋಗಿದೆ ಎಂದರೆ ಸರಿಯಲ್ಲ. ಶ್ರೀಮಪ್ಪನ ಮನೆಯ ಉತ್ತರ ದಿಕ್ಕಿಗೆ ಪಂಚಾಯತಿ ರಸ್ತೆ ಇದೆ ಎಂದರೆ ಸರಿಯಲ್ಲ. ಸದರೀ ಉತ್ತರ ದಿಕ್ಕಿನ ಬಾಗಿಲು ಈಗಲೂ ಅಸ್ತಿತ್ವದಲ್ಲಿದೆ ಎಂದರೆ ಸರಿಯಲ್ಲ. ಸದರೀ ಮನೆಯ ಉತ್ತರ ದಿಕ್ಕಿಗೆ ನನ್ನ ಮನೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯ ಮನೆಯ ಪಶ್ಚಿಮ ದಿಕ್ಕಿಗೆ ರಸ್ತೆಗೆ ಮುಖ ಮಾಡಿ ಬಾಗಿಲು ಇದೆ ಎಂದರೆ ಸರಿ. ವಾದಿಯ ಮನೆಯ ಪೂರ್ವ ದಿಕ್ಕಿನ ರಸ್ತೆಯಲ್ಲಿ ಅಂದಾಜು 3 ವರ್ಷಗಳ ಹಿಂದೆ ಪ್ರತಿವಾದಿಯರ ತಂದೆ ರಾಮಪ್ಪ ಇಮಾರತ್ತು ಕಟ್ಟಿರುತ್ತಾನೆ. ಪ್ರತಿವಾದಿಯರ ತಂದೆ ಮೃತ ಪಟ್ಟು 35 ವರ್ಷ ಆಯಿತು ಎಂದರೆ ಸರಿ. ನನ್ನ ಮತ್ತು ಶ್ರೀಮಪ್ಪನ ಮನೆಯ ಮುಂದೆ ಇಮಾರತು ಕಟ್ಟಿಲ್ಲ. ವಾದಿ ಈಗ ಆತನ ತಮ್ಮನ ಹಿಸ್ಸೆಯಲ್ಲಿ ಹಾದು ಪೂರ್ವದ ರಸ್ತೆಗೆ ಹೋಗಿ ವಹಿವಾಟು ಮಾಡುತ್ತಾನೆ. ಸದರೀ ಇಮಾರತು ಕಟ್ಟಲು 2 ವರ್ಷ ತಗುಲಿರುತ್ತದೆ. ಆಗ ನಾವು ಓಣಿಯ ಜನರು ಆದ ನಾನು, ಕೃಷ್ಣಪ್ಪ, ಅಣ್ಣಪ್ಪ, ಮತ್ತು ಫಕ್ಕೀರಪ್ಪ ಕಟನೂರು ಪಂಚಾಯತಿಗೆ ತಕರಾರು ಸಲ್ಲಿಸಿದ್ದೆವು. ವಾದಿ ಮತ್ತು ಶ್ರೀಮಪ್ಪ ಪ್ರತ್ಯೇಕವಾಗಿ ತಕರಾರು ಸಲ್ಲಿಸಿದ್ದರು. ಪಂಚಾಯತಿಯವರ ಬಳಿ ಪ್ರತಿವಾದಿಯರು ಇಮಾರತು ತೆಗೆಯುವುದಾಗಿ ಹೇಳಿದರೂ, ತೆಗೆಯಲಿಲ್ಲ. ಪಂಚಾಯತಿಯವರು ಇಲ್ಲಿಯ ತನಕ ಸ್ಥಳ ಪರಿಶೀಲನೆಗೆ ಬಂದಿಲ್ಲ.

6. ಪ್ರತಿವಾದಿ ಪರವಾನಿಗೆ ಪಡೆದು ಇಮಾರತು ಕಟ್ಟಿರುತ್ತಾರೆ. ಅವರು ವಾದಿಯ ಜಾಗವನ್ನು ಮತ್ತು ಸರಕಾರಿ ರಸ್ತೆಯನ್ನು ಅತಿಕ್ರಮಣ ಮಾಡಿ ಇಮಾರತು ಕಟ್ಟಿರುತ್ತಾರೆ. ಸರಕಾರಿ ರಸ್ತೆಯಲ್ಲಿ 3-4 ಅಡಿ ಹಾಗೂ ವಾದಿಯ ಆಸ್ತಿಯಲ್ಲಿ 6-8 ಅಡಿ ಅತಿಕ್ರಮಣ ಮಾಡಿರುತ್ತಾರೆ. ವಾದಿಗೆ ಅಡ್ಡಾಡಲು ಪ್ರತಿವಾದಿಯರು ಜಾಗವನ್ನು ನೀಡಿದ್ದರು. ಅವರು ಉತ್ತರ-ದಕ್ಷಿಣ ಮೂರೂವರೆ ಮೊಳ ಜಾಗವನ್ನು ನೀಡಿದ್ದರು. ಪೂರ್ವ-ಪಶ್ಚಿಮ 15-20 ಅಡಿ ಜಾಗವನ್ನು ನೀಡಿದ್ದರು. ಈ ಬಗ್ಗೆ ಕಾಗದ ಪತ್ರಗಳು ಇವೆ. ಅಂದಾಜು 70 ವರ್ಷಗಳಿಂದ ಕಾಗದಪತ್ರಗಳು ಇವೆ. ನಾನು ಹೇಳುವಂತೆ ಯಾವುದೇ ಜಾಗೆಯನ್ನು ಬಿಟ್ಟುಕೊಟ್ಟಿಲ್ಲ , ಯಾವುದೇ ಕಾಗದಪತ್ರ ಆಗಿಲ್ಲ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಹಾಗೂ ವಾದಿ ಅನ್ಯೋನ್ಯವಾಗಿದ್ದೇವೆ. ನಾನು ಮತ್ತು ಪ್ರತಿವಾದಿಯರು ಚೆನ್ನಾಗಿಲ್ಲ ಎಂದರೆ ಸುಳ್ಳು. ನನ್ನ ಅಜ್ಜನ ಕಾಲದಿಂದಲೂ ನನ್ನ ಹಾಗೂ ಪ್ರತಿವಾದಿಯರ

ಮನೆತನಕ್ಕೆ ಮನಸ್ತಾಪ ಇದೆ ಎಂದರೆ ಸರಿಯಲ್ಲ. ನಾನು ಮಧ್ಯಪಾನ ಮಾಡುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ವಾದಿ ಹಣ ನೀಡುತ್ತಾನೆ ಎಂದರೆ ಸರಿಯಲ್ಲ. ಆ ಕಾರಣ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೆ ಸರಿ ಇದೆ

ಸಹಿ ಆಗಿದೆ.
ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಕುಂದಗೋಳ